## ಈ ಲೇಖನದ ವಿಷಯಾನುಕ್ರಮಣಿಕೆ


ಭೀಷ್ಮಾಷ್ಟಮೀ ಆಚರಣೆ 2

ಭೀಷ್ಮಾಷ್ಟಮಿಯನ್ನು ಎಂದು ಆಚರಿಸಬೇಕು 3

ತರ್ಪಣವನ್ನು ಯಾರುಯಾರು ನೀಡಬೇಕು? 4

ನಮ್ಮ ಪಿತೃಗಳಿಗೂ ತಿಲತರ್ಪಣ ನೀಡಬಹುದೇ? 7

ತರ್ಪಣವನ್ನು ನೀಡದಿದ್ದರೆ ಪುಣ್ಯಹಾನಿ 8

ಶ್ರಾದ್ಧ ಮಾಡಿದರೆ ಸತ್ಸಂತಾನಪ್ರಾಪ್ತಿ 9

ತರ್ಪಣದ ಸಂಕಲ್ಪ 10

ತರ್ಪಣದ ಮಂತ್ರಗಳು 12

ವೈಯಾಘ್ರಪದ್ಯ ಅಲ್ಲ ವೈಯಾಘ್ರಪಾದ 16

ವರ್ಮಿಣೇ ಅಲ್ಲ ವರ್ಮಣೇ 18

ಭೀಷ್ಮಾಚಾರ್ಯರು ಮಾಡಿದ ಕಡೆಯ ಕೃಷ್ಣಸ್ತೋತ್ರ 20




## ಭೀಷ್ಮಾಷ್ಟಮೀ ಆಚರಣೆ

ಮಾಘ ಶುಕ್ಲಪಕ್ಷದ ಅಷ್ಟಮೀ ಭೀಷ್ಮಾಚಾರ್ಯರು ದೇಹತ್ಯಾಗ ಮಾಡಿದ ದಿವಸ. ಆದ್ದರಿಂದ ಭೀಷ್ಮಾಷ್ಟಮೀ ಎಂದೇ ಈ ಅಷ್ಟಮಿಗೆ ಹೆಸರು.

ಭೀಷ್ಮಾಚಾರ್ಯರು ಆಜನ್ಮ ಬ್ರಹ್ಮಚಾರಿಗಳು. ಯುಧಿಷ್ಠಿರನಿಗೆ ಉಪದೇಶ ಮಾಡುವ ಮುಖಾಂತರ ಸಮಗ್ರ ಜಗತ್ತಿಗೆ ತತ್ವೋಪದೇಶವನ್ನು ಮಾಡಿದ ಮಹಾಗುರುಗಳು.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಈ ನಾಲ್ಕೂ ವರ್ಣದವರಿಗೆ ಅವರು ಗುರುಗಳಾದ್ದರಿಂದ ಎಲ್ಲ ವರ್ಣದವರೂ ಭೀಷ್ಮಾಚಾರ್ಯರಿಗೆ ಭೀಷ್ಮಾಷ್ಟಮಿಯಂದು ತರ್ಪಣವನ್ನು ನೀಡಬೇಕು.

## ಭೀಷ್ಮಾಷ್ಟಮಿಯನ್ನು ಎಂದು ಆಚರಿಸಬೇಕು

ಭೀಷ್ಮಾಷ್ಟಮಿಯಂದು ಮಾಡಬೇಕಾದ ಸತ್ಕರ್ಮ, ಭೀಷ್ಮರಿಗೆ ತರ್ಪಣ ನೀಡುವದು. ಅಂದರೆ ಪಿತೃಕಾರ್ಯ.

ಹೀಗಾಗಿ ಮಧ್ಯಾಹ್ನಕಾಲದಲ್ಲಿ ಅಷ್ಟಮಿ ಎಂದು ಇರುತ್ತದೆಯೋ ಅಂದೇ ಭೀಷ್ಮಾಷ್ಟಮಿಯನ್ನು ಆಚರಿಸಬೇಕು.

ಎರಡು ದಿವಸಗಳಲ್ಲಿ ಅಷ್ಟಮಿ ಬಂದಿದ್ದರೆ, ಯಾವ ದಿವಸ ಮಧ್ಯಾಹ್ನಕಾಲದಲ್ಲಿ (ಕುತಪಕಾಲ[1]ವನ್ನು ಆರಂಭಿಸಿ) ಇರುವದೋ ಆ ದಿವಸ ಆಚರಿಸಬೇಕು.

ಎರಡೂ ದಿವಸ ಕುತಪಕಾಲದಲ್ಲಿ ಅಷ್ಟಮಿ ಇದ್ದರೆ, ಯಾವ ದಿವಸ ಸಾಯಂಕಾಲದವರೆಗೂ ಅಷ್ಟಮಿ ಇರುತ್ತದೆಯೋ ಅಂದು ಭೀಷ್ಮಾಷ್ಟಮಿ.

---

[1] ಆಯಾ ದಿವಸದ ಸೂರ್ಯೋದಯವಾದ ನಂತರ  5 ಗಂಟೆ 37 ನೇ ನಿಮಿಷಕ್ಕೆ ಕುತಪಕಾಲ ಆರಂಭವಾಗಿ ಅಲ್ಲಿಂದ 48 ನಿಮಿಷಗಳು ಕುತಪಕಾಲ ಇರುತ್ತದೆ. ಅಂದರೆ ಆರು ಗಂಟೆಗೆ ಸೂರ್ಯೋದಯವಾದರೆ, 11:37 ಕ್ಕೆ ಕುತಪಕಾಲ ಆರಂಭವಾಗಿ 12:15 ಕ್ಕೆ ಮುಗಿಯುತ್ತದೆ. ಶ್ರಾದ್ಧ ಮಾಡಬೇಕಾದರೆ ಶ್ರಾದ್ಧತಿಥಿ ಈ ಕುತಪಕಾಲದಲ್ಲಿ ಇರಲೇಬೇಕು.

## ತರ್ಪಣವನ್ನು ಯಾರುಯಾರು ನೀಡಬೇಕು?

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕೂ ವರ್ಣದ ಪುರುಷರೂ ಭೀಷ್ಮಾಚಾರ್ಯರಿಗೆ ಭೀಷ್ಮಾಷ್ಟಮಿಯಂದು ತಿಲತರ್ಪಣ ನೀಡಲೇಬೇಕು ಎಂದು ಮಹಾಭಾರತ ತಿಳಿಸುತ್ತದೆ —

ಅಷ್ಟಮ್ಯಾಂ ತು ಸಿತೇ ಪಕ್ಷೇ
ಭೀಷ್ಮಾಯ ತು ತಿಲೋದಕಮ್ ।
ಅನ್ನಂ ಚ ವಿಧಿವದ್ ದದ್ಯುಃ
ಸರ್ವೇ ವರ್ಣಾ ದ್ವಿಜಾತಯಃ ।

ಇಲ್ಲಿ ಸರ್ವೇ ವರ್ಣಾಃ ಎಂದು ಸ್ಪಷ್ಟವಾಗಿ ನಾಲ್ಕೂ ವರ್ಣದವರು ತಿಲೋದಕವನ್ನು ನೀಡಬೇಕು ಎಂದಿದೆ[2].

[2] ದ್ವಿಜಾತಯಃ ಎನ್ನುವದು ಸಂಬೋಧನೆ ಎಂದು ಸ್ಮೃತಿಸಂಗ್ರಹಕಾರರ ಅಭಿಪ್ರಾಯ. ಬ್ರಾಹ್ಮಣರೇ, ನಾಲ್ಕೂ ವರ್ಣದವರು ತಿಲತರ್ಪಣ ನೀಡಬೇಕು ಎಂದು ಅನ್ವಯ. ಕೆಲವರು ದ್ವಿಜಾತಯಃ ವರ್ಣಾಃ ಎಂದು ವಿಶೇಷಣವನ್ನಾಗಿ ಅನ್ವಯ ಮಾಡಿ, ಎರಡು ಬಾರಿ ಹುಟ್ಟಿರುವ ವರ್ಣಗಳು, ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಮಾತ್ರ ನೀಡಬೇಕು ಎಂದೂ ಅರ್ಥ ಮಾಡುತ್ತಾರೆ.

ತರ್ಪಣ ನೀಡಿದ ಬಳಿಕ ಭೀಷ್ಮಾಚಾರ್ಯರಿಗೆ ಸವ್ಯದಿಂದ ಅರ್ಘ್ಯವನ್ನೂ ನೀಡಬೇಕು.

ತಂದೆ ಬದುಕಿಲ್ಲದವರು ಅಪಸವ್ಯದಿಂದ ತಿಲತರ್ಪಣವನ್ನು ನೀಡಬೇಕು.  ಪಿತೃಗಳಿಗೆ ನೀಡುವಂತೆ.

ತಂದೆ ಬದುಕಿರುವವರು ಸವ್ಯದಿಂದ ಕೇವಲ ಜಲತರ್ಪಣವನ್ನು ನೀಡಬೇಕು[3]. ಸವ್ಯದಿಂದಲೇ ತರ್ಪಣ, ಸವ್ಯದಿಂದಲೇ ಅರ್ಘ್ಯ. ತರ್ಪಣ ನೀಡಬೇಕಾದರೆ ತಂದೆ ಇರುವವರೂ ದಕ್ಷಿಣಕ್ಕೆ ಮುಖ ಮಾಡಿಯೇ ನೀಡಬೇಕು

**ಆಭಿರದ್ಭಿರವಾಪ್ನೋತು ಪುತ್ರಪೌತ್ರೋಚಿತಾಂ ಕ್ರಿಯಾಂ** ಎಂದು ಮಂತ್ರವಿರುವದರಿಂದ ಇದು ಸ್ಪಷ್ಟವಾಗಿ ಪಿತೃಕಾರ್ಯ. ಹೀಗಾಗಿ ದಕ್ಷಿಣಕ್ಕೆ ಅಭಿಮುಖವಾಗಿ, ತಿಲಗಳಿಂದ ತರ್ಪಣ ಮತ್ತು ಕುತಪಕಾಲದಲ್ಲಿ ಆಚರಣೆ

[3] ತಂದೆ ಬದುಕಿರುವವರು ಸವ್ಯದಿಂದ ಅಕ್ಕಿಯಲ್ಲಿ ತರ್ಪಣ ನೀಡಬೇಕು ಎಂದು ಕೆಲವರು ಹೇಳುತ್ತಾರೆ.

ತಂದೆ ಬದುಕಿರುವವರು ಹೀಗೆ ತರ್ಪಣ ನೀಡಬಹುದೇ? ತರ್ಪಣ ನೀಡುವದು ತಂದೆ ಬದುಕಿಲ್ಲದವರಿಗೆ ಮಾತ್ರ ಇರುವ ಅಧಿಕಾರವಲ್ಲವೇ ಎಂಬ ಪ್ರಶ್ನೆಗೆ ಪದ್ಮಪುರಾಣ ಉತ್ತರ ನೀಡುತ್ತದೆ —

**ಜೀವತ್ಪಿತಾಪಿ ಕುರ್ವೀತ**
**ತರ್ಪಣಂ ಯಮಭೀಷ್ಮಯೋಃ**

ನಿಜ. ತರ್ಪಣ ನೀಡುವದು ತಂದೆ ಬದುಕಿಲ್ಲದವರ ಅಧಿಕಾರ. ಆದರೆ, ದೀಪಾವಳಿಯಲ್ಲಿ ಯಮಧರ್ಮದೇವರಿಗೆ ಮತ್ತು ಭೀಷ್ಮಾಷ್ಟಮಿಯಲ್ಲಿ ಭೀಷ್ಮಾಚಾರ್ಯರಿಗೆ ತಂದೆ ಬದುಕಿರುವವರೂ ತರ್ಪಣ ನೀಡಲೇಬೇಕು ಎಂದು ವಿಶೇಷ ನಿಯಮವಿರುವದರಿಂದ ತಂದೆ ಬದುಕಿರುವವರು ತರ್ಪಣ ನೀಡಲೇಬೇಕು.

ಶೂದ್ರರು ಯಾವುದೇ ಮಂತ್ರವನ್ನುಚ್ಚರಿಸದೇ ತರ್ಪಣವನ್ನು ನೀಡಬೇಕು.

## ನಮ್ಮ ಪಿತೃಗಳಿಗೂ ತಿಲತರ್ಪಣ ನೀಡಬಹುದೇ?

ಭೀಷ್ಮಾಷ್ಟಮಿಯಂದು ಭೀಷ್ಮಾಚಾರ್ಯರಿಗೆ ಮಾತ್ರ ತಿಲತರ್ಪಣ.  ಈ ದಿವಸ ಪಿತೃಗಳಿಗೆ ನೀಡಲೇಬೇಕೆಂದು ನಿಯಮವಿಲ್ಲ. **ಗಂಗಾದಿ ತೀರ್ಥಗಳಲ್ಲಿ ಸ್ನಾನ ಮಾಡುತ್ತಿದ್ದರೆ ಪಿತೃಗಳಿಗೂ ನೀಡುವದು ಉತ್ತಮ ಪಕ್ಷ.** ಆ ರೀತಿಯಾಗಿ ತೀರ್ಥಗಳಿಗೆ ಹೋದಾಗ ತರ್ಪಣವನ್ನು ನೀಡಬಹುದು ಎಂದು ಶಾಸ್ತ್ರ ವಿಧಿಸುತ್ತದೆ. ಶೀತಲಾಸು ಚ ತೋಯಾಸು ಎಂದು. ನೀಡುವವರು ಭೀಷ್ಮರಿಗೆ ನೀಡಿದ ನಂತರ ಪಿತೃಗಳಿಗೆ ನೀಡಬೇಕು.

ಪಿತೃಗಳಿಗೆ ತಿಲತರ್ಪಣ ನೀಡದಿದ್ದ ಪಕ್ಷದಲ್ಲಿ ಪಿತೃಗಳಿಗೆ ಎಂದಿನಂತೆ ನಿರ್ಮಾಲ್ಯತೀರ್ಥ ಮತ್ತು ನಿರ್ಮಾಲ್ಯತುಳಸೀಪುಷ್ಪಗಳಿಂದ ತರ್ಪಣವನ್ನು ನೀಡಲೇಬೇಕು. ಬ್ರಹ್ಮಯಜ್ಞದ ಅಂಗವಾಗಿ.

## ತರ್ಪಣವನ್ನು ನೀಡದಿದ್ದರೆ ಪುಣ್ಯಹಾನಿ

ಈ ದಿವಸ ತಿಲತರ್ಪಣವನ್ನು ನೀಡದಿದ್ದರೆ ಗಳಿಸಿದ ಪುಣ್ಯವನ್ನು ಕಳೆದುಕೊಳ್ಳುತ್ತೇವೆ ಎಂದು ಶಾಸ್ತ್ರ ತಿಳಿಸುತ್ತದೆ —

**ಬ್ರಾಹ್ಮಣಾದ್ಯಾಶ್ಚ ಯೇ ವರ್ಣಾಃ**
**ದದ್ಯುರ್ಭೀಷ್ಮಾಯ ನೋ ಜನಮ್**
**ಸಂವತ್ಸರಕೃತಂ ತೇಷಾಂ**
**ಪುಣ್ಯಂ ನಶ್ಯತಿ ಸತ್ತಮ**

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕೂ ವರ್ಣದವರು ಭೀಷ್ಮಾಷ್ಟಮಿಯಂದು ಭೀಷ್ಮಾಚಾರ್ಯರಿಗೆ ತರ್ಪಣ ನೀಡದಿದ್ದಲ್ಲಿ ಒಂದು ವರ್ಷದ ಪುಣ್ಯವನ್ನು ಕಳೆದುಕೊಳ್ಳುತ್ತಾರೆ.

**ಭೀಷ್ಮಾಷ್ಟಮಿಯಂದು ಭೀಷ್ಮಾಚಾರ್ಯರನ್ನು ಉದ್ದೇಶಿಸಿ ಶ್ರಾದ್ಧ ಮಾಡಿದರೆ ಸತ್ಸಂತಾನವಾಗುತ್ತದೆ. ಆದರೆ ಶ್ರಾದ್ಧ ಮಾಡದಿದ್ದರೆ ದೋಷವಿಲ್ಲ. ಆದರೆ ತರ್ಪಣವನ್ನು ನೀಡಲೇಬೇಕು. ತರ್ಪಣ ನೀಡದಿದ್ದರೆ ದೋಷ.**

## ಶ್ರಾದ್ಧ ಮಾಡಿದರೆ ಸತ್ಸಂತಾನಪ್ರಾಪ್ತಿ

ಸತ್ಸಂತಾನದ ಅಪೇಕ್ಷೆ ಇರುವವರು, ಅಥವಾ ಮಕ್ಕಳಾಗದೇ ಇರುವವರು (ಮಗ ಅಥವಾ ಮಗಳಿಗೆ ಮಕ್ಕಳಾಗದೇ ಇದ್ದಲ್ಲಿ ಅವರಿಗೆ ಮಕ್ಕಳಾಗಲಿ, ತನ್ನ ವಂಶ ಬೆಳೆಯಲಿ ಎಂಬ ಉದ್ದೇಶವಿರುವವರೂ) ಭೀಷ್ಮಾಚಾರ್ಯರನ್ನು ಕುರಿತು ಶ್ರಾದ್ಧ ಮಾಡಬಹುದು.

ಅನ್ನಂ ಚ ವಿಧಿವದ್ ದದ್ಯುಃ ಎಂದು ಹಿಂದೆ ಉದಾಹರಿಸಿದ ವಚನದಲ್ಲಿ ಭೀಷ್ಮಾಚಾರ್ಯರಿಗೆ ಶ್ರಾದ್ಧವನ್ನೂ ಮಾಡಬೇಕು ಎಂದಿದೆ. ಪದ್ಮಪುರಾಣದಲ್ಲಿ ಇನ್ನೂ ಸ್ಪಷ್ಟವಾದ ವಚನವೇ ಇದೆ —

**ಮಾಘೇ ಮಾಸಿ ಸಿತಾಷ್ಟಮ್ಯಾಂ**
**ಸತಿಲಂ ಭೀಷ್ಮತರ್ಪಣಮ್ ।**
**ಶ್ರಾದ್ಧಂ ಚ ಯೇ ನರಾಃ ಕುರ್ಯುಃ**
**ತೇ ಸ್ಯುಃ ಸಂತತಿಭಾಗಿನಃ ।**

ಶ್ರಾದ್ಧ ಮಾಡುವವರ ವಂಶ ಸದಾ ಬೆಳಗುತ್ತಿರುತ್ತದೆ. ನಿಲ್ಲುವದಿಲ್ಲ.

## ತರ್ಪಣದ ಸಂಕಲ್ಪ

ಸವ್ಯದಿಂದ ಆಚಮನ, ಪ್ರಾಣಾಯಾಮಗಳನ್ನು ಮಾಡಿ, ದೇಶ ಕಾಲಗಳ ಸ್ಮರಣೆಯನ್ನು ಮಾಡಿ

**ಗಂಗಾಶಂತನುಪುತ್ರ-ಭೀಷ್ಮಾಂತರ್ಗತ**
**ಭಾರತೀರಮಣಮುಖ್ಯಪ್ರಾಣಾಂತಾರ್ಗತ**
**ಶ್ರೀ ವಿಷ್ಣುಪ್ರೇರಣಯಾ**
**ಶ್ರೀ ವಿಷ್ಣುಪ್ರೀತ್ಯರ್ಥಂ**
**ಭೀಷ್ಮಾಷ್ಟಮ್ಯಾಂ**
**ವ್ಯಾಘ್ರಪಾದಗೋತ್ರಂ ಭೀಷ್ಮಮುದ್ದಿಶ್ಯ ಅಪಸವ್ಯೇನ ತಿಲತರ್ಪಣಮ್**[4]**,**
**ಸವ್ಯೇನ ಅರ್ಘ್ಯದಾನಂ ಚ ಕರಿಷ್ಯೇ**
ಎಂದು ಸಂಕಲ್ಪಿಸಬೇಕು.

---

[4] ತಂದೆ ಇರುವವರು ಸವ್ಯೇನ ತರ್ಪಣಂ, ಅರ್ಘ್ಯಂ ಚ ಕರಿಷ್ಯೇ ಎಂದು ಸಂಕಲ್ಪಿಸಬೇಕು.

ಸಂತಾನ ಮತ್ತು ವಂಶಾಭಿವೃದ್ಧಿಯ ಅಪೇಕ್ಷೆ ಇರುವವರು

**ಗಂಗಾಶಂತನುಪುತ್ರ-ಭೀಷ್ಮಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತಾರ್ಗತ ಶ್ರೀವಿಷ್ಣುಪ್ರಸಾದೇನ ಮಮ ಸತ್ಸಂತಾನಪ್ರಾಪ್ತ್ಯರ್ಥಮ್, ವಂಶಾಭಿವೃದ್ಧ್ಯರ್ಥಂ ಚ ಭೀಷ್ಮಾಷ್ಟಮ್ಯಾಂ ವ್ಯಾಘ್ರಪಾದಗೋತ್ರಂ ಭೀಷ್ಮಮುದ್ದಿಶ್ಯ ಅಪಸವ್ಯೇನ ತಿಲತರ್ಪಣಮ್[5], ಸವ್ಯೇನ ಅರ್ಘ್ಯದಾನಂ ಚ ಕರಿಷ್ಯೇ**
ಎಂದು ಸಂಕಲ್ಪಿಸಬೇಕು.

ಇಷ್ಟೂ ಕಾರ್ಯ ಸವ್ಯದಿಂದಲೇ.

---

[5] ತಂದೆ ಇರುವವರು ಸವ್ಯೇನ ತರ್ಪಣಂ, ಅರ್ಘ್ಯಂ ಚ ಕರಿಷ್ಯೇ ಎಂದು ಸಂಕಲ್ಪಿಸಬೇಕು.

## ತರ್ಪಣದ ಮಂತ್ರಗಳು

ಆ ನಂತರ ದಕ್ಷಿಣಾಮುಖವಾಗಿ ಕುಳಿತು ಅಪಸವ್ಯವಾಗಿ ಬಲಗೈಯಲ್ಲಿ ಎಳ್ಳು ಮತ್ತು ವಿಷ್ಣುನಿರ್ಮಾಲ್ಯ ತುಳಸೀಪುಷ್ಪಗಳನ್ನು ಹಿಡಿದು ಕೆಳಗಿನ ಮಂತ್ರವನ್ನು ಹೇಳುತ್ತ ತರ್ಪಣವನ್ನು ನೀಡಬೇಕು.

**ವೈಯಾಘ್ರಪಾದಗೋತ್ರಾಯ**
**ಸಾಂಕೃತಿಪ್ರವರಾಯ[6] ಚ |**
**ಅಪುತ್ರಾಯ ದದಾಮ್ಯೇತತ್**
**ಜಲಂ ಭೀಷ್ಮಾಯ ವರ್ಮಣೇ ||**

ಸಂಕೃತಿ ಎಂಬ ಋಷಿಯನ್ನು ಪ್ರವರಋಷಿಯನ್ನಾಗಿ ಉಳ್ಳ ವ್ಯಾಘ್ರಪದಗೋತ್ರದಲ್ಲಿ ಜನಿಸಿದ, ಮಕ್ಕಳಿಲ್ಲದ ಭೀಷ್ಮವರ್ಮರಿಗೆ ಈ ತರ್ಪಣವನ್ನು ನೀಡುತ್ತೇನೆ.

---

[6] ಇಲ್ಲಿ ಸಾಂಕೃತ್ಯಪ್ರವರಾಯ ಎಂದೂ ಪಾಠವಿದೆ. ಧರ್ಮಶಾಸ್ತ್ರದ ಹಳೆಯ ಪುಸ್ತಕಗಳಲ್ಲಿ ಸಾಂಕೃತಿ ಎಂದೇ ಇದೆ. ಅರ್ಥ ಎರಡರಲ್ಲಿಯೂ ಒಂದೇ. ಸಾಂಕೃತಿ ಎಂಬ ಋಷಿಗಳ ಉಲ್ಲೇಖ ಮಹಾಭಾರತದಲ್ಲಿದೆ.

ಭೀಷ್ಮವರ್ಮಾಣಂ ವ್ಯಾಘ್ರಪದಗೋತ್ರಂ ವಸ್ವಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಪ್ರದ್ಯುಮ್ನಂ ತರ್ಪಯಾಮಿ

ಎಂದು ಮೂರು ಬಾರಿ ಹೇಳಿ ಮೂರು ಬಾರಿ ತರ್ಪಣವನ್ನು ನೀಡಬೇಕು.

ಆ ನಂತರ ಪೂರ್ವಾಭಿಮುಖನಾಗಿ, ಜನಿವಾರವನ್ನು ಸರಿಯಾಗಿ ಹಾಕಿಕೊಂಡು ಸೂರ್ಯನಿಗೆ ಅರ್ಘ್ಯ ನೀಡುವಂತೆ ಭೀಷ್ಮಾಚಾರ್ಯರಿಗೆ ಅರ್ಘ್ಯವನ್ನು ನೀಡಬೇಕು.

**ವಸೂನಾಮವತಾರಾಯ**
**ಶಂತನೋರಾತ್ಮಜಾಯ ಚ**
**ಅರ್ಘ್ಯಂ ದದಾಮಿ ಭೀಷ್ಮಾಯ**
**ಆಬಾಲಬ್ರಹ್ಮಚಾರಿಣೇ**

ವಸುಗಳಲ್ಲಿ ಎಂಟನೆಯ ವಸುವಾದ ದ್ಯು ಎಂಬ ದೇವತೆಯ ಅವತಾರರಾದ, ಶಂತನುವಿನ ಮಗನಾದ, ಬಾಲ್ಯದಿಂದಲೂ

ಬ್ರಹ್ಮಚಾರಿಯಾಗಿಯೇ ಉಳಿದ ಭೀಷ್ಮಾಚಾರ್ಯರಿಗೆ ಅರ್ಘ್ಯವನ್ನು ಸಮರ್ಪಿಸುತ್ತೇನೆ.

ಎಂದು ಬಲಗೈಯಲ್ಲಿ ನೀರನ್ನು ಹಾಕಿಕೊಂಡು ಬಿಡಬೇಕು.

ಆ ಬಳಿಕ ಕೈಗಳನ್ನು ಜೋಡಿಸಿ ನಾವು ನೀಡಿರುವ ತರ್ಪಣ ಮತ್ತು ಅರ್ಘ್ಯಗಳು ಭೀಷ್ಮಾಚಾರ್ಯರಿಗೆ ತಲುಪಲಿ ಎಂದು ಶ್ರೀಹರಿಯನ್ನು ಪ್ರಾರ್ಥಿಸಬೇಕು.

**ಭೀಷ್ಮಃ ಶಾಂತನವೋ ವೀರಃ**
**ಸತ್ಯವಾದೀ ಜಿತೇಂದ್ರಿಯಃ ।**
**ಆಭಿರದ್ಭಿರವಾಪ್ನೋತು**
**ಪುತ್ರಪೌತ್ರೋಚಿತಾಂ ಕ್ರಿಯಾಮ್ ।**

ಶಂತನುವಿನ ಪುತ್ರರಾದ, ಮಹಾಪರಾಕ್ರಮಿಯಾದ, ಸದಾ ಸತ್ಯವನ್ನೇ ಮಾತನಾಡಿದ, ಜಿತೇಂದ್ರಿಯರಾದ, ಭೀಷ್ಮಾಚಾರ್ಯರು ನಾನು ನೀಡಿದ ನೀರಿನಿಂದ ಸಕಲ ಪುತ್ರ-ಪೌತ್ರರು ಮಾಡಬೇಕಾದ ಕ್ರಿಯೆಗಳ ಫಲವನ್ನು ಪಡೆಯಲಿ.

ಆ ನಂತರ

**ಅನೇನ ಭೀಷ್ಮತರ್ಪಣ-ಅರ್ಘ್ಯಪ್ರದಾನೇನ ಭೀಷ್ಮಾಂ ಭೀಷ್ಮಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತಾರ್ಗತ ಶ್ರೀವಿಷ್ಣುಃ ಪ್ರೀಯತಾಮ್**

ಎಂದು ಹೇಳಿ ಸಕಲ ಕರ್ಮವನ್ನೂ ಗುರ್ವಂತರ್ಯಾಮಿಯಾದ ಶ್ರೀಹರಿಗೆ ಸಮರ್ಪಿಸಬೇಕು.

**ತಂದೆ ಬದುಕಿಲ್ಲದವರು ತಿಲತರ್ಪಣವನ್ನು ನೀಡಿರುವ ಕಾರಣ ರಾತ್ರಿ ಊಟ ಮಾಡಬಾರದು. ತಂದೆ ಬದುಕಿರುವವರು ಊಟ ಮಾಡಬಹುದು.**

ಈ ಭೀಷ್ಮತರ್ಪಣಮಂತ್ರಗಳನ್ನು ವಿಪರೀತ ತಪ್ಪಾಗಿ ಮುದ್ರಿಸುತ್ತಾರೆ. ಅದಕ್ಕಾಗಿ ಸರಿಯಾದ ಪಾಠ ಮತ್ತು ಅದಕ್ಕೆ ಕಾರಣಗಳನ್ನು ನೀಡುತ್ತೇನೆ.

## ವೈಯಾಘ್ರಪದ್ಯ ಅಲ್ಲ ವೈಯಾಘ್ರಪಾದ

ವ್ಯಾಘ್ರಪದ ಎನ್ನುವದು ಒಬ್ಬ ಋಷಿಯ ಹೆಸರು. ವ್ಯಾಘ್ರಪಾದರಿಗೆ ಸಂಬಂಧಿಸಿದ ಗೋತ್ರ, ವೈಯಾಘ್ರಪಾದಗೋತ್ರ. [7]

ವೈಯಾಘ್ರಪಾದ್ಯ, ವೈಯಾಘ್ರಪದ್ಯ ಎನ್ನುವದು ಅಪದ್ಧ ಶಬ್ದಗಳು. ಸರಿಯಾದ ಶಬ್ದ ವೈಯಾಘ್ರಪಾದ.

ವ್ಯಾಘ್ರಪದರು ಸ್ಮೃತಿಗ್ರಂಥವನ್ನು ರಚನೆ ಮಾಡಿದ ಮಹಾಋಷಿಗಳು. ಅವರ ಅನೇಕ ವಚನಗಳನ್ನು ಎಲ್ಲ ಧರ್ಮಶಾಸ್ತ್ರದ ಸಂಗ್ರಹಕಾರರು ಉಲ್ಲೇಖಿಸಿದ್ದಾರೆ. ಶ್ರೀ ಕೃಷ್ಣಾಚಾರ್ಯರೂ ಸ್ಮೃತಿಮುಕ್ತಾವಳಿಯಲ್ಲಿ ಉಲ್ಲೇಖಿಸಿದ್ದಾರೆ.

---

[7] ಕೆಲವರು  ವ್ಯಾಘ್ರಪಾದರ ಮಗ ವೈಯಾಘ್ರಪಾದರೇ ಗೋತ್ರಪ್ರವರ್ತಕರು ಎಂದು ತಿಳಿದಿದ್ದಾರೆ. ಆದರೆ ಗೋತ್ರ ಸೂಚಿಯಲ್ಲಿ ವ್ಯಾಘ್ರಪಾದಗೋತ್ರ ದೊರೆಯುತ್ತದೆ, ವೈಯಾಘ್ರಪಾದಗೋತ್ರವಿಲ್ಲ. ಶ್ಲೋಕದಲ್ಲಿ ಛಂದಸ್ಸಿನ ಅನುಕೂಲಕ್ಕಾಗಿ ವೈಯಾಘ್ರಪಾದಗೋತ್ರಾಯ ಎಂದಿದೆ, ಮತ್ತೂ ಆ ಶಬ್ದಕ್ಕೆ ವ್ಯಾಘ್ರಪದಗೋತ್ರದವರು ಎಂದು ಅರ್ಥವಾಗುತ್ತದೆ, ಯಾವ ವಿರೋಧವಿಲ್ಲ. ಇಲ್ಲದ ವೈಯಾಘ್ರಪಾದಗೋತ್ರವನ್ನು ಕಲ್ಪನೆ ಮಾಡಬಾರದು. ಇರುವ ವ್ಯಾಘ್ರಪಾದಗೊತ್ರವನ್ನೇ ತಿಳಿಯಬೇಕು.

ಅನುಶಾಸನಪರ್ವದಲ್ಲಿ ಬರುವ ಉಪಮನ್ಯು ಶ್ರೀಕೃಷ್ಣಸಂವಾದದಲ್ಲಿ ವ್ಯಾಘ್ರಪಾದರ ಉಲ್ಲೇಖ ಬರುತ್ತದೆ —

**ಪುರಾ ಕೃತಯುಗೇ ತಾತ**
**ಋಷಿರಾಸೀತ್ ಮಹಾಯಶಾಃ**
**ವ್ಯಾಘ್ರಪಾದ ಇತಿ ಖ್ಯಾತೋ**
**ವೇದವೇದಾಂಗಪಾರಗಃ** ಎಂದು.

ಉಪಮನ್ಯು ಮತ್ತು ಧೌಮ್ಯರು ವ್ಯಾಘ್ರಪಾದರ ಮಕ್ಕಳು.

ಪ್ರಾಯಃ ಇದೇ ವ್ಯಾಘ್ರಪಾದರೇ ಈ ಶ್ಲೋಕದಲ್ಲಿ ಉಲ್ಲೇಖಗೊಂಡಿರುವ ಗೋತ್ರಪ್ರವರ್ತಕ-ರಾಗಿರಬೇಕು ಎಂದು ತೋರುತ್ತದೆ.

ಮುಂದೆ ನಿರ್ಣಾಯಕ ಪ್ರಮಾಣ ದೊರೆತಲ್ಲಿ ತಿಳಿಸುತ್ತೇನೆ.

## ವರ್ಮಿಣೇ ಅಲ್ಲ ವರ್ಮಣೇ

ತರ್ಪಣದ ಮಂತ್ರದಲ್ಲಿ ಆಗುವ ಮತ್ತೊಂದು ತಪ್ಪು, ವರ್ಮಿಣೇ ಎಂದು.

ಭೀಷ್ಮಾಯ ವರ್ಮಿಣೇ ಎಂದಲ್ಲ ಪಾಠ. ಭೀಷ್ಮಾಯ ವರ್ಮಣೇ ಎನ್ನುವದೇ ಯುಕ್ತವಾದ ಪಾಠ.

ಬ್ರಾಹ್ಮಣರಿಗೆ ಶ್ರಾದ್ಧವನ್ನು ಮಾಡುವಾಗ ಶರ್ಮ ಎಂಬ ಶಬ್ದವನ್ನು ಹೇಳಿಯೇ ಶ್ರಾದ್ಧ ಮಾಡುತ್ತೇವೆ. ಕೃಷ್ಣಶರ್ಮಣೇ, ಗೋವಿಂದಶರ್ಮಣೇ ಎಂದು.

ಕ್ಷತ್ರಿಯರಿಗೆ ಶ್ರಾದ್ಧ ಮಾಡುವಾಗ ವರ್ಮಶಬ್ದವನ್ನು ಬಳಸಬೇಕು. ಭೀಷ್ಮವರ್ಮಣೇ ಎಂದು.

ವರ್ಮಿಣೇ ಎಂದರೆ ಕವಚವುಳ್ಳವನು ಎಂದರ್ಥ. ಇಲ್ಲ ಕವಚದ ಪ್ರಸಕ್ತಿ ಇಲ್ಲ. ಕ್ಷತ್ರಿಯರಾದ್ದರಿಂದ ವರ್ಮಶಬ್ದದ ಪ್ರಸಕ್ತಿ ಇದೆ. ಬ್ರಾಹ್ಮಣರಿಗೆ ಶರ್ಮಶಬ್ದದಂತೆ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಪರಮಾನುಗ್ರಹದಿಂದ ವಿಶ್ವನಂದಿನಿಯ ಲೇಖನಗಳು ಹಾಗೂ ಉಪನ್ಯಾಸಗಳು ಸಜ್ಜನರ ಮೇಲೆ ಬೀರುತ್ತಿರುವ ಪರಿಣಾಮವನ್ನು ಕಂಡು ತುಂಬ ಸಂತೋಷವಾಗುತ್ತಿದೆ.

ಇಂತಹ ಘೋರ ಕಲಿಯುಗದಲ್ಲಿ ಧರ್ಮದ ಕುರಿತು ಒಳ್ಳೆಯ ಅಭಿಪ್ರಾಯದ ಮಾತುಗಳನ್ನಾಡುವವರೇ ಕಡಿಮೆ. ಧರ್ಮ ಇದು ಮಾನವರ ದುರಂತ ಎಂದು ಭ್ರಾಂತರಾಗಿರುವ ಜನಸಮೂಹದ ಮಧ್ಯದಲ್ಲಿ ಶ್ರದ್ಧೆಯಿಂದ ಧರ್ಮಾಚರಣೆಯನ್ನು ಮಾಡುತ್ತಿರುವ ನಿಮ್ಮನ್ನು ಕಂಡು ಮನಸ್ಸಿಗೆ ತುಂಬ ನೆಮ್ಮದಿಯುಂಟಾಗುತ್ತದೆ.

ಧರ್ಮ ಮಾಡುವವರ ಸಂತತಿ ಕೋಟಿಯಾಗಲಿ ಎಂದು ಪ್ರಾರ್ಥಿಸಿ ಈ ಭೀಷ್ಮತರ್ಪಣದ ಕುರಿತ ಲೇಖನವನ್ನು ಗುರ್ವಂತರ್ಯಾಮಿಯ ಪಾದಕ್ಕೊಪ್ಪಿಸಿಕೊಳ್ಳುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

## ಭೀಷ್ಮಾಚಾರ್ಯರು ಮಾಡಿದ ಕಡೆಯ ಕೃಷ್ಣಸ್ತೋತ್ರ



ವಿಶ್ವನಂದಿನಿಯ ಆತ್ಮೀಯ ಬಾಂಧವರಾದ ನಮ್ಮ ರಜತ್ ರವರು ಬರೆದು ನೀಡಿರುವ ಚಿತ್ರ

ಪಾಂಡವರು, ಸಕಲ ಋಷಿಗಳು, ವೇದವ್ಯಾಸದೇವರು ಪರಶುರಾಮದೇವರು ನೋಡುವಾಗ, ಕಟ್ಟ ಕಡೆಯ ಕ್ಷಣದಲ್ಲಿ ಭೀಷ್ಮಾಚಾರ್ಯರು ಶ್ರೀಕೃಷ್ಣನನ್ನು ಸ್ತೋತ್ರ ಮಾಡುತ್ತಿರುವ ಪ್ರಸಂಗ.

Click on the words to open Upanyasas.

## ಭೀಷ್ಮಸ್ತೋತ್ರ 01

ತಮ್ಮೆದುರಿಗೆ ಬಂದು ನಿಂತಿರುವ ಶ್ರೀಕೃಷ್ಣನೇ ಸರ್ವರಂತರ್ಯಾಮಿಯಾದ ಸರ್ವನಿಯಾಮಕನಾದ ಸರ್ವಸ್ರಷ್ಟಾರನಾದ ಪರಮಾತ್ಮ ಎಂದು ಧರ್ಮರಾಜರಿಗೆ ತಿಳಿಸಿ ಹೇಳಿ, ಎಲ್ಲ ಧರ್ಮಗಳ ಉಪದೇಶವನ್ನು ಮಾಡಿ ಕಡೆಯ ಕಾಲ ಬಂದಾಗ ಶ್ರೀಕೃಷ್ಣನ ಸ್ತೋತ್ರವನ್ನು ಮಾಡುತ್ತಾರೆ. ಅನುರಾಗ ತುಂಬಿದ ನೋಟದಿಂದ ಶ್ರೀಕೃಷ್ಣ ಅವರನ್ನು ಕಂಡಾಗ ಅವರ ದೇಹದ ಎಲ್ಲ ನೋವೂ ಸಹ ಮರೆಯಾಗುತ್ತದೆ. ಆಗ ಭೀಷ್ಮಾಚಾರ್ಯರು ಮಾಡಿದ ಅಪೂರ್ವಸ್ತೋತ್ರದ — ಯಾವ ಸ್ತೋತ್ರದ ಪಠಣ-ಚಿಂತನಗಳಿಂದ ಅಂತ್ಯಕಾಲದಲ್ಲಿ ನಮಗೆ ದೇವರ ಸ್ಮರಣೆ ಒದಗಿ ಬರುತ್ತದೆಯೋ ಅಂತಹ ಸ್ತೋತ್ರದ — ಅರ್ಥಾನುಸಂಧಾನದ ಮೊದಲ ಭಾಗ ಇಲ್ಲಿದೆ.

## ಭೀಷ್ಮಸ್ತೋತ್ರ 02

ಕುರುಕ್ಷೇತ್ರದ ಯುದ್ಧದಲ್ಲಿ ನಾನು ಆಯುಧವನ್ನು ಹಿಡಿಯುವದಿಲ್ಲ ಎಂದು ಶ್ರೀಕೃಷ್ಣ ತಿಳಿಸಿರುತ್ತಾನೆ. ಆದರೆ, ಕೃಷ್ಣನ ಕೈಯಲ್ಲಿ ಆಯುಧವನ್ನು ನಾನು

ಹಿಡಿಸಿಯೇ ಹಿಡಿಸುತ್ತೇನೆ ಎಂದು ಭೀಷ್ಮಾಚಾರ್ಯರು ಪ್ರತಿಜ್ಞೆ ಮಾಡಿರುತ್ತಾರೆ. ತನ್ನ ಭಕ್ತನ ಪ್ರತಿಜ್ಞೆಯನ್ನು ಪೂರ್ಣ ಮಾಡಲೋಸುಗ ಶ್ರೀಕೃಷ್ಣ, ಮೃದುವಾಗಿ ಯುದ್ಧ ಮಾಡುತ್ತಿದ್ದ ಅರ್ಜುನನನ್ನು ಎಚ್ಚರಿಸಲು, ಒಮ್ಮೆ ಚಕ್ರವನ್ನು ಹಿಡಿದು ಭೀಷ್ಮರನ್ನು ಕೊಲ್ಲ ಹೋಗುತ್ತಾನೆ. ಆ ಪ್ರಸಂಗವನ್ನು ನೆನೆಯುತ್ತ ಭೀಷ್ಮಾಚಾರ್ಯರು ದೇವರ ಕಾರುಣ್ಯ ಮಾಹಾತ್ಮ್ಯಗಳನ್ನ ಚಿಂತಿಸುತ್ತಾರೆ. ಮಹಾಭಾರತದ ವಚನಗಳ ಉಲ್ಲೇಖದೊಂದಿಗೆ ಆ ಪ್ರಸಂಗವನ್ನು ನಿರೂಪಿಸಿ, ದೇವರನ್ನು ಕಾಣುತ್ತಲೇ ಭೀಷ್ಮರು ದೇಹತ್ಯಾಗ ಮಾಡುವ ಸಂದರ್ಭದ ವಿವರಣೆ ಇಲ್ಲಿದೆ.

## <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name VISHWANANDINI**
- **Account Number 35368588017**
- **Account Type Current Account**
- **Bank State Bank of India**
- **Branch T. Narasipura, Mysore**
- **NEW IFSC SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491